# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1097 (1268)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಎನ್. ರವಿಕುಮಾರ್ (ವಿಧಾನ ಸಭಾ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **13/03/2026** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕ ಇಲಾಖೆಯ ಕಾರ್ಮಿಕರಿಗೆ ವಿತರಿಸಲಾಗುವ ಸುರಕ್ಷತಾ ಪರಿಕರಗಳನ್ನು ಒಳಗೊಂಡಿರುವ ಸುರಕ್ಷತಾ ಕಿಟ್‌ಗಳಿಗೆ ಸಂಬಂಧಿಸಿದಂತೆ ಹಿಂದೆ ಖರೀದಿಸಿರುವ ಸುರಕ್ಷತಾ ಕಿಟ್‌ಗಳು ಇನ್ನೂ ಸಂಪೂರ್ಣವಾಗಿ ವಿತರಣೆ ಆಗದೇ ಇರುವ ಸಂದರ್ಭದಲ್ಲಿ ಸುಮಾರು 4 ಲಕ್ಷ ಹೊಸ ಸುರಕ್ಷತಾ ಕಿಟ್‌ಗಳನ್ನು ಖರೀದಿಸಿರುವುದು ನಿಜವೇ;</td><td>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಒಟ್ಟು 24.81 ಲಕ್ಷ ನೋಂದಾಯಿತ ಫಲಾನುಭವಿಗಳಿದ್ದು, 2024-25ರಲ್ಲಿ 1.96 ಲಕ್ಷ ಸುರಕ್ಷತಾ ಕಿಟ್‌ಗಳನ್ನು ಮಾತ್ರ ಖರೀದಿ ಮಾಡಿ ಈಗಾಗಲೇ 1.08 ಲಕ್ಷ ಕಿಟ್‌ಗಳನ್ನು ವಿತರಿಸಲಾಗಿದ್ದು, ಉಳಿದ ಕಿಟ್‌ಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.<br>ಉಳಿದ ಫಲಾನುಭವಿಗಳಿಗೆ ಸೇಫ್ಟಿ ಕಿಟ್ ನೀಡಲು 2025-26ರಲ್ಲಿ 3.89 ಲಕ್ಷ ಕಿಟ್‌ಗಳನ್ನು ಖರೀದಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>ಕಟ್ಟಡ ಕಾರ್ಮಿಕರು ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ಸುರಕ್ಷತೆ ಒದಗಿಸುವ ಹಿತ ದೃಷ್ಟಿಯಲ್ಲಿ ಈ ಕಿಟ್‌ಗಳನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ಕಿಟ್‌ಗಳನ್ನು ಸ್ವೀಕರಿಸಲು ಯಾವ ಮಾನದಂಡಗಳನ್ನು (ಪ್ಯಾರಾಮೀಟರ್) ಅನುಸರಿಸಲಾಗುತ್ತಿದೆ; ಸುರಕ್ಷತಾ ಕಿಟ್‌ಗಳಲ್ಲಿ ಇರುವ ಪರಿಕರಗಳನ್ನು ಉತ್ಪಾದನೆ ಮಾಡುವ ಕಂಪನಿಯ ಹೆಸರು ಹಾಗೂ ಪರಿಕರಗಳ ಮೂಲ ಬೆಲೆಯ ಮಾಹಿತಿ ಒದಗಿಸುವುದು;</td><td>ಸುರಕ್ಷತಾ ಕಿಟ್‌ಗಳನ್ನು ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳು ಸ್ವೀಕರಿಸಿ ಫಲಾನುಭವಿಗಳಿಗೆ ವಿತರಿಸಲು ಮಂಡಳಿಯಿಂದ ಪ್ರತ್ಯೇಕ SOP ಯನ್ನು ನೀಡಲಾಗಿದ್ದು, ಅದನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br>ವೃತ್ತಿವಾರು ಸುರಕ್ಷತಾ ಕಿಟ್ ಗಳ ದರ ಈ ಕೆಳಗಿನಂತಿವೆ.
<table>
<tr><th>ಕ್ರ ಸಂ</th><th>ವೃತ್ತಿವಾರು ಸುರಕ್ಷತಾ ಟೂಲ್ ಕಿಟ್</th><th>ಪ್ರತಿ ಕಿಟ್‌ನ ದರ (ರೂ ಗಳಲ್ಲಿ)</th></tr>
<tr><td>1</td><td>ಪ್ಲಂಬರ್</td><td>4705</td></tr>
<tr><td>2</td><td>ಪೈಂಟರ್</td><td>7845</td></tr>
<tr><td>3</td><td>ಕಾರ್ಪೆಂಟರ್</td><td>4005</td></tr>
<tr><td>4</td><td>ವೆಲ್ಡರ್</td><td>3975</td></tr>
<tr><td>5</td><td>ಎಲೆಕ್ಟ್ರಿಷಿಯನ್</td><td>4585</td></tr>
<tr><td>6</td><td>ಮೇಸನ್</td><td>5045</td></tr>
</table></td></tr>
</table>

| | | |
|---|---|---|
| | | ಸೇಫ್ಟಿ ಕಿಟ್‌ಗಳ ಟೆಂಡರ್ ಪ್ರಕ್ರಿಯೆಯಲ್ಲಿ Technical specifications ಅನ್ನು ಮಾತ್ರ ನಿರ್ದಿಷ್ಟಪಡಿಸಿದ್ದು, ಅದರಲ್ಲಿ ಯಾವುದೇ ನಿರ್ದಿಷ್ಟ ಕಂಪನಿಯ ಹೆಸರನ್ನು ನಮೂದಿಸಿರುವುದಿಲ್ಲ. |
| ಇ) | ಸದರಿ ಸುರಕ್ಷತಾ ಕಿಟ್‌ಗಳನ್ನು ಸಂಗ್ರಹಿಸಲು (ಸ್ಟೋರೇಜ್) ಎಷ್ಟು ವಿಸ್ತೀರ್ಣದ ಜಾಗದ ಅಗತ್ಯವಿದೆ; ಅಷ್ಟು ವಿಸ್ತೀರ್ಣದ ಜಾಗ ಎಲ್ಲೆಲ್ಲಿ ಲಭ್ಯವಿದೆ; ಹಾಗೂ ಈಗಾಗಲೇ ಖರೀದಿಸಿರುವ ಸುರಕ್ಷತಾ ಕಿಟ್‌ಗಳನ್ನು ಸಂಗ್ರಹಿಸಿಟ್ಟಿರುವ ಜಾಗಗಳ ಕುರಿತಾದ ಮಾಹಿತಿ ಒದಗಿಸುವುದು. | ಸೇಫ್ಟಿ ಕಿಟ್‌ಗಳನ್ನು ಖರೀದಿಸಿ ಕಟ್ಟಡ ಕಾರ್ಮಿಕರಿಗೆ ಹಂಚಲು ರಾಜ್ಯಾದ್ಯಂತ 43 ಕ್ಷೇತ್ರ ಮಟ್ಟದ ಕಾರ್ಮಿಕ ಅಧಿಕಾರಿಗಳು ಮತ್ತು ಅವರ ಸೂಚನೆಯಂತೆ ಕಾರ್ಮಿಕ ನಿರೀಕ್ಷಕರುಗಳಿಗೆ ಪೂರೈಸಿದ್ದು, ಸದರಿ ಅಧಿಕಾರಿಗಳ ಕಛೇರಿಯಲ್ಲಿಯೇ ಕಿಟ್‌ಗಳನ್ನು ಸಂಗ್ರಹಿಸಿ ವಿತರಣೆ ಮಾಡಲು ಸ್ಥಳಾವಕಾಶ ಇರುವ ಕಡೆ ಸದರಿ ಕಛೇರಿಗಳಲ್ಲಿ ಮತ್ತು ಲಭ್ಯವಿರುವ ಸರ್ಕಾರಿ ಕಟ್ಟಡಗಳಲ್ಲಿ ಸಂಗ್ರಹಿಸಲಾಗಿದೆ.<br>ಉಳಿದಂತೆ ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ಮಾತ್ರ ಬಾಡಿಗೆ ಕಟ್ಟಡದಲ್ಲಿ ಕಿಟ್‌ಗಳನ್ನು ಸಂಗ್ರಹಿಸಲಾಗಿದೆ. |
| ಈ) | ಹಿಂದೆ ಖರೀದಿಸಿರುವ ಸುರಕ್ಷತಾ ಕಿಟ್‌ಗಳ ವಿತರಣೆ ಇನ್ನೂ ಪೂರ್ಣಗೊಳ್ಳದೇ ಇರುವಾಗ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ತುರ್ತು ಅಗತ್ಯ ಇದೆಯೇ; | ಕಟ್ಟಡ ಕಾರ್ಮಿಕರು ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ಸುರಕ್ಷತೆ ಒದಗಿಸುವ ಹಿತ ದೃಷ್ಟಿಯಲ್ಲಿ ಸುರಕ್ಷತಾ ಕಿಟ್‌ಗಳನ್ನು ನೀಡಲಾಗುತ್ತಿದೆ. ಇದರಿಂದಾಗಿ ಕಾರ್ಮಿಕರ ಪ್ರಾಣ ಹಾನಿಯನ್ನು ತಪ್ಪಿಸಲು ಸಾಧ್ಯವಾಗಲಿದೆ. |
| ಉ) | ಸುರಕ್ಷತಾ ಕಿಟ್ ವಿತರಣೆಗೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿಯಾಗಿದೆ; ಕಾರ್ಮಿಕರ ಆಧಾರ್ ಕಾರ್ಡ್ ಅಥವಾ ಕಾರ್ಮಿಕ ಗುರುತಿನ ಚೀಟಿ ಇವುಗಳ ಆಧಾರದ ಮೇಲೆ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ ಮಾಡಲಾಗಿದೆಯೇ; ಕಿಟ್ ನೀಡಿರುವುದಕ್ಕೆ ಸ್ವೀಕೃತಿ (Receipt) ಪಡೆದುಕೊಳ್ಳಲಾಗಿದೆಯೇ; (ಮಾಹಿತಿ ಒದಗಿಸುವುದು) | ಸೇಫ್ಟಿ ಕಿಟ್‌ಗಳನ್ನು ವೃತ್ತಿಗೆ ಅನುಗುಣವಾಗಿ ಶಿಷ್ಟಾಚಾರದಂತೆ ವಿತರಣೆ ಮಾಡಲಾಗಿದೆ. ಕಿಟ್‌ಗಳನ್ನು ವಿತರಣೆ ಮಾಡುವಾಗ ಕಾರ್ಮಿಕ ಕಾರ್ಡ್‌ಗಳು ಮತ್ತು ಆಧಾರ್ ಕಾರ್ಡ್‌ಗಳ ಪ್ರತಿಗಳನ್ನು ಪಡೆದು, ನಂತರ ಕಾರ್ಮಿಕರ ಸಹಿಯನ್ನು ಪಡೆಯಲಾಗಿದೆ.<br>ಸುರಕ್ಷತಾ ಕಿಟ್‌ಗಳನ್ನು ಅರ್ಹ ನೋಂದಾಯಿತ ಕಾರ್ಮಿಕರಿಗೆ ವಿತರಿಸಿ ಅವರಿಂದ ಪಡೆದುಕೊಂಡಿರುವ ದಾಖಲೆಗಳ ಪ್ರತಿಯನ್ನು **ಅನುಬಂಧ-02ರಲ್ಲಿ** ಪೆನ್‌ಡ್ರೈವ್ ಮೂಲಕ ನೀಡಿದೆ. |
| ಊ) | ಕಿಟ್‌ಗಳ ಸಂಗ್ರಹಣೆ, ಲಭ್ಯವಿರುವ ಸಂಗ್ರಹಣಾ ಜಾಗದ ಹೊಂದಾಣಿಕೆ ಹಾಗೂ ಪಾರದರ್ಶಕ ಮತ್ತು ದೋಷರಹಿತ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಸಂಪೂರ್ಣ ಸ್ಟ್ಯಾಂಡರ್ಡ್ ಅಪರೇಟಿಂಗ್ ಪ್ರೋಸೀಜರ್ (SOP) ವಿವರಗಳನ್ನು ಒದಗಿಸುವುದು; | ಮಂಡಳಿಯಿಂದ ಪ್ರತ್ಯೇಕ SOP ಯನ್ನು ನೀಡಲಾಗಿರುತ್ತದೆ (**ಅನುಬಂಧ -1**ರಲ್ಲಿ ಲಗತ್ತಿಸಿದೆ). ಅದರಂತೆ ಪಾರದರ್ಶಕವಾಗಿ ಶಿಷ್ಟಾಚಾರವನ್ನು ಪಾಲನೆ ಮಾಡಿಕೊಂಡು ವಿತರಿಸಲು ಕ್ಷೇತ್ರ ಮಟ್ಟದ ಕಾರ್ಮಿಕ ಅಧಿಕಾರಿಗಳಿಂದ ಕ್ರಮ ವಹಿಸಲಾಗುತ್ತಿದೆ. |
| ಋ) | ಸುರಕ್ಷತಾ ಕಿಟ್‌ಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೇ; | ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಕರೆದು ಅರ್ಹ ಸರಬರಾಜು ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿರುತ್ತದೆ. |

| | | |
|---|---|---|
| | ಕರೆದಿದ್ದಲ್ಲಿ, ಟೆಂಡರ್‌ನ ಮೊತ್ತ ಎಷ್ಟು; ಸುರಕ್ಷತಾ ಕಿಟ್‌ನ ಪರಿಕರಗಳ ಗುಣಮಟ್ಟ ಪರಿಶೀಲಿಸಲಾಗಿದೆಯೇ; ಹೌದಾದಲ್ಲಿ, ಗುಣಮಟ್ಟ ಪರಿಶೀಲಿಸಿರುವ ಅಧಿಕಾರಿಗಳ ಹೆಸರು ಹಾಗೂ ಹುದ್ದೆಯ ಮಾಹಿತಿ ಒದಗಿಸುವುದು; ಅಲ್ಲದೇ ಸುರಕ್ಷತಾ ಕಿಟ್‌ನಲ್ಲಿರುವ ಪರಿಕರಗಳು ISI ಪ್ರಮಾಣೀಕೃತವಾಗಿದೆಯೇ? (ಮಾಹಿತಿ ಒದಗಿಸುವುದು) | ಸುರಕ್ಷತಾ ಕಿಟ್ ಸಂಬಂಧ 2025-26ನೇ ಸಾಲಿನಲ್ಲಿ ಕರೆದಿರುವ ಇ-ಟೆಂಡರ್ ಗಳ ಮೊತ್ತ ರೂ.**195.94** ಕೋಟಿ ಆಗಿರುತ್ತದೆ<br><br>ಟೆಂಡರ್‌ವಾರು ಒಟ್ಟು ಪರಿಮಾಣದಲ್ಲಿ Randomly ಶೇ.10ರಷ್ಟು ವಿವಿಧ ವೃತ್ತಿವಾರು ಸುರಕ್ಷತಾ ಕಿಟ್‌ಗಳ ಗುಣಮಟ್ಟವನ್ನು ಪರಿಶೀಲಿಸಲಾಗಿರುತ್ತದೆ. ಸುರಕ್ಷತಾ ಕಿಟ್‌ನ ಸಾಮಾಗ್ರಿಗಳ ಗುಣಮಟ್ಟ ಪರಿಶೀಲಿಸಿರುವ ಅಧಿಕಾರಿಗಳ ವಿವರ ಈ ಕೆಳಗಿನಂತಿದೆ.<br>1. ಶ್ರೀ ಸತೀಶ್ ರಾವ್ ಎನ್.ಎಸ್., ಹೆಚ್.ಒ.ಡಿ, ಮೆಕಾನಿಕಲ್ ಇಂಜಿನಿಯರಿಂಗ್, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br>2. ಶ್ರೀ ರವಿಶಂಕರ್ ಸಿ.ವಿ., ಪ್ರಾಂಶುಪಾಲರು, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br>3. ಶ್ರೀ ಮಲ್ಲಿಕಾರ್ಜುನ್ ಎನ್. ಹಿರಿಯ ಅಧ್ಯಾಪಕರು, ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್. ಸರ್ಕಲ್, ಬೆಂಗಳೂರು.<br><br>ಸುರಕ್ಷತಾ ಕಿಟ್‌ನಲ್ಲಿರುವ ಎಲ್ಲಾ ಪರಿಕರಗಳು ISI ಪ್ರಮಾಣೀಕೃತವಾಗಿರುತ್ತದೆ. |

**ಕಾಇ 103 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

ಅನುಬಂಧ - 01

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ಕಛೇರಿ: 080-29753350
Kbocwwb@karnataka.gov.in

ಸಂಖ್ಯೆ: KBOCWWB/Safety kit/CR-01/2025-26 ದಿನಾಂಕ:31-01-2026

## ಸುತ್ತೋಲೆ

ವಿಷಯ: 2025-26ನೇ ಸಾಲಿನ ಶ್ರಮ ಸಾಮರ್ಥ್ಯ ಯೋಜನೆಯಡಿ ವಿವಿಧ ವೃತ್ತಿಗಳ ಮೇಸನ್, ಎಲೆಕ್ಟ್ರೀಷಿಯನ್, ವೆಲ್ಡರ್, ಕಾರ್ಪೆಂಟರ್, ಪೇಯಿಂಟರ್ ಮತ್ತು ಪ್ಲಂಬರ್ ವೃತ್ತಿಯ "ಸುರಕ್ಷತಾ ಕಿಟ್" (Safety Kits) ಗಳನ್ನು ನೊಂದಾಯಿತ ಅರ್ಹ ಫಲಾನುಭವಿಗಳಿಗೆ ವಿತರಿಸಲು ಮಾರ್ಗಸೂಚಿಗಳನ್ನು (SOP) ಹೊರಡಿಸಿರುವ ಕುರಿತು.

ಉಲ್ಲೇಖ:
1. ದಿನಾಂಕ:19-05-2025 ರಂದು ನಡೆದ ಮಂಡಳಿಯ 45ನೇ ಸಭೆಯ ನಡವಳಿ.
2. ಸರ್ಕಾರದ ಆಡಳಿತಾತ್ಮಕ ಆದೇಶದನ್ವಯ.
3. ದಿನಾಂಕ:31-01-2026 ರಂದು ಸುರಕ್ಷತಾ ಕಿಟ್‌ಗಳ ವಿತರಣೆಗೆ ಸಂಬಂಧಿಸಿದಂತೆ ನಡೆದ ಸಭೆಯ ನಡವಳಿ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025-26ನೇ ಸಾಲಿನ ಶ್ರಮ ಸಾಮರ್ಥ್ಯ ಯೋಜನೆಯಡಿ ವಿವಿಧ ವೃತ್ತಿಗಳ ಮೇಸನ್, ಎಲೆಕ್ಟ್ರೀಷಿಯನ್, ವೆಲ್ಡರ್, ಕಾರ್ಪೆಂಟರ್, ಪೇಯಿಂಟರ್ ಮತ್ತು ಪ್ಲಂಬರ್ ವೃತ್ತಿಯ "ಸುರಕ್ಷತಾ ಕಿಟ್" (Safety Kits) ಗಳನ್ನು ನೊಂದಾಯಿತ ಫಲಾನುಭವಿಗಳಿಗೆ ನೀಡುವ ಯೋಜನೆಯನ್ನು ಕಾರ್ಮಿಕ ಅಧಿಕಾರಿ ಉಪವಿಭಾಗವಾರು ಅನುಷ್ಠಾನಗೊಳಿಸಲು ಸರ್ಕಾರವು ಉಲ್ಲೇಖಿತ ಪತ್ರದ ಮುಖೇನ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಿರುತ್ತದೆ. ಅಲ್ಲದೇ, ಸದರಿ ಆದೇಶದಲ್ಲಿ ವಿವಿಧ ವೃತ್ತಿಗಳ "ಸುರಕ್ಷತಾ ಕಿಟ್" ಗಳನ್ನು ವಿತರಿಸಲು ಸೂಕ್ತ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಜಾರಿಗೊಳಿಸಲು ತಿಳಿಸಿರುತ್ತದೆ.

ಆದಕಾರಣ, ಮಂಡಳಿಯ ವತಿಯಿಂದ ಶ್ರಮ ಸಾಮರ್ಥ್ಯ ಯೋಜನೆಯಡಿ ವಿವಿಧ ವೃತ್ತಿಗಳ "ಸುರಕ್ಷತಾ ಕಿಟ್" ಗಳನ್ನು (Safety Kits) ನೊಂದಾಯಿತ ಫಲಾನುಭವಿಗಳಿಗೆ ಪೂರೈಸಲು ಅರ್ಹ ಸಂಸ್ಥೆಗಳನ್ನು ಆಯ್ಕೆ ಮಾಡಿ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾರ್ಯಾದೇಶಗಳನ್ನು ಈಗಾಗಲೇ ಇ-ಮೇಲ್ ಮೂಲಕ ರವಾನಿಸಲಾಗಿದೆ. ಉಪ ವಿಭಾಗವಾರು ಸುರಕ್ಷತಾ ಕಿಟ್‌ಗಳನ್ನು ಅರ್ಹ ಫಲಾನುಭವಿಗಳಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ವಯ ವಿತರಣೆ ಮಾಡಿಸಲು ಸೂಚಿಸಿದೆ.

**2025-26ನೇ ಸಾಲಿನಲ್ಲಿ 38 ಕಾರ್ಮಿಕ ಅಧಿಕಾರಿವಾರು ಒಟ್ಟು ಮಂಡಳಿಯಿಂದ ಏಜೆನ್ಸಿಗಳ ಮುಖಾಂತರ 3,89,365 ಸುರಕ್ಷತಾ ಕಿಟ್‌ಗಳನ್ನು ವಿತರಿಸುವ ಸಂಬಂಧ, ಸರಬರಾಜು ಆದೇಶ ಪಡೆದ ನಂತರ ಸರಬರಾಜುದಾರರು ನಿರ್ವಹಿಸಬೇಕಾದ ಕೆಲಸಗಳು:-**

1) ಪೂರೈಕೆದಾರರು ಒದಗಿಸಬೇಕಾದ ವಿವಿಧ ವೃತ್ತಿಗಳ ಸುರಕ್ಷತಾ ಕಿಟ್‌ಗಳನ್ನು Technical Specifications ಗಳಂತೆ ಕಾರ್ಯಾದೇಶದಲ್ಲಿ ಸರಬರಾಜು ಮಾಡಬೇಕಾಗಿರುವ Milestone ನಂತೆ ಪ್ರಮಾಣಗಳ ಕಿಟ್‌ಗಳನ್ನು ಸಿದ್ಧಪಡಿಸಿಕೊಂಡು ಕಾರ್ಮಿಕ ಸೇವಾ ಕೇಂದ್ರದಿಂದ ನೀಡುವ

ಬಾರ್ ಕೋಡ್‌ನ್ನು ವೃತ್ತಿವಾರು ಕಿಟ್‌ಗಳಲ್ಲಿ ಒಳಗೊಂಡಿರುವ ಎಲ್ಲಾ ಐಟಂಗಳಗೂ ಹಾಗೂ ಬ್ಯಾಗಗಳ ಮೇಲೆ ಅಳವಡಿಸಬೇಕಾಗಿರುತ್ತದೆ.

2) ಎಲ್ಲಾ ಐಟಂಗಳಗೂ Manufacturer ರವರಿಂದ ಗುಣಮಟ್ಟದ ಬಗ್ಗೆ (as per Technical Specifications) ದೃಢೀಕರಿಸುವ ಪ್ರಮಾಣ ಪತ್ರವನ್ನು ಸರಬರಾಜುದಾರರು ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ.

3) ನಂತರ 3ನೇ ವ್ಯಕ್ತಿಯ ತಪಾಸಣೆಗೆ ಒಳಪಡಿಸಲು ಮಂಡಳಿಗೆ ಪತ್ರವನ್ನು ಬರೆಯಬೇಕಾಗಿರುತ್ತದೆ. ಸದರಿ ಪತ್ರದಲ್ಲಿ ಸುರಕ್ಷತಾ ಕಿಟ್‌ಗಳನ್ನು ಸಂಗ್ರಹಣೆ ಮಾಡಿರುವ ಸ್ಥಳದ ವಿಳಾಸವನ್ನು ನಮೂದಿಸಬೇಕಾಗಿರುತ್ತದೆ. 3ನೇ ವ್ಯಕ್ತಿಯ ತಪಾಸಣೆಗೆ ಒಳಪಡಿಸಲು ಬಾರ್ ಕೋಡ್‌ನೊಂದಿಗೆ ಸಿದ್ಧಪಡಿಸಿರುವ ವೃತ್ತಿವಾರು ಕಿಟ್‌ಗಳ ಸಂಖ್ಯೆಯನ್ನು ಸಹ ನಮೂದಿಸಬೇಕಾಗಿರುತ್ತದೆ.

4) ಸದರಿ ಒಟ್ಟು ಕಿಟ್‌ಗಳಲ್ಲಿ 3ನೇ ವ್ಯಕ್ತಿಯ ತಪಾಸಣೆ ತಂಡದವರು Randomly 10% ವೃತ್ತಿವಾರು ಸುರಕ್ಷತಾ ಕಿಟ್‌ಗಳನ್ನು ಗುಣಮಟ್ಟವನ್ನು as per Technical Specifications ಗಳಂತೆ ಪರಿಶೀಲಿಸಿ ಉತ್ತಮ ಗುಣಮಟ್ಟ ಇರುವ ಬಗ್ಗೆ ವರದಿಯನ್ನು ಮಂಡಳಿಗೆ ಸಲ್ಲಿಸಿದ ನಂತರ ಕಾರ್ಮಿಕ ಸೇವಾ ಕೇಂದ್ರಕ್ಕೆ ಸರಬರಾಜು ಮಾಡಲು ಕ್ರಮವಹಿಸಬೇಕಾಗಿರುತ್ತದೆ ಹಾಗೂ 3ನೇ ವ್ಯಕ್ತಿಯ ತಪಾಸಣೆಗೆ ಒಳಪಡಿಸಿರುವ 10% ಕಿಟ್‌ಗಳಲ್ಲಿ ಒಂದು ಸೆಟ್ ಕಿಟ್‌ಗಳನ್ನು ಸಂಬಂಧಪಟ್ಟ ಕಾರ್ಮಿಕ ಸೇವಾ ಕೇಂದ್ರಕ್ಕೆ ಹಾಗೂ ಒಂದು ಸೆಟ್ ಕಿಟ್‌ಗಳನ್ನು ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. (ಹೆಚ್ಚುವರಿಯಾಗಿ 2 ಸೆಟ್ ಕಿಟ್‌ಗಳನ್ನು ತಾವುಗಳೇ ಪೂರೈಸಬೇಕಾಗಿರುತ್ತದೆ.) ಅವುಗಳನ್ನು ಮಾದರಿಯಾಗಿಟ್ಟುಕೊಂಡು ಉಳಿದ ಕಿಟ್‌ಗಳನ್ನು ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳು ಕಾರ್ಮಿಕ ಸೇವಾ ಕೇಂದ್ರದಿಂದ (KSK) ಸ್ವೀಕೃತಿ ನೀಡುವಾಗ ಪರಿಶೀಲಿಸಿಕೊಳ್ಳುವುದು.

5) ಸರಬರಾಜುದಾರರು ಕಿಟ್‌ಗಳನ್ನು ಕಾರ್ಮಿಕ ಸೇವಾ ಕೇಂದ್ರಕ್ಕೆ ಸರಬರಾಜು ಮಾಡುವುದಿಕ್ಕಿಂತ ಮುಂಚಿತವಾಗಿ ಸಂಬಂದಪಟ್ಟ ಕಾರ್ಮಿಕ ಸೇವಾ ಕೇಂದ್ರಕ್ಕೆ ಮಾಹಿತಿಯನ್ನು ನೀಡಿ ಕಿಟ್‌ಗಳನ್ನು ದಾಸ್ತಾನು ಮಾಡಿಕೊಳ್ಳಲು ಸಂಬಂದಪಟ್ಟ ಕಾರ್ಮಿಕ ಸೇವಾ ಕೇಂದ್ರದವರ ಸಮನ್ವಯದೊಂದಿಗೆ ಸರಬರಾಜು ಮಾಡಬೇಕಾಗಿರುತ್ತದೆ.

6) ತದನಂತರ, ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳು ಕಾರ್ಮಿಕ ಸೇವಾ ಕೇಂದ್ರದಿಂದ (KSK) ಸ್ವೀಕೃತಿ ಪಡೆದ ಚಲನ್‌ಅನ್ನು ಮಂಡಳಿಗೆ ಇನ್‌ವೈಸ್‌ಗಳೊಂದಿಗೆ ಸಲ್ಲಿಸಿ, ಬಿಲ್ಲ್‌ನ್ನು ಸಲ್ಲಿಸಬಹುದಾಗಿರುತ್ತದೆ.

7) ಕಾರ್ಯಾದೇಶದಲ್ಲಿ ತಿಳಿಸಿರುವಂತೆ ಸದರಿ ಕಿಟ್‌ಗಳು 10,000 ಗಳ ಒಳಗಿದ್ದಲ್ಲಿ 6 ತಿಂಗಳ ಅವಧಿಯಲ್ಲಿ ಕಾರ್ಮಿಕ ಅಧಿಕಾರಿವಾರು ಸೂಚಿಸಿರುವ ಪ್ರಮಾಣದನ್ವಯ ಕಾರ್ಯಾದೇಶ ಪಡೆದ ದಿನದಿಂದ 90 ದಿನಗಳೊಳಗೆ 50% ಮತ್ತು ತದನಂತರದ 60 ದಿನಗಳಲ್ಲಿ ಉಳಿದ 50% ಕಿಟ್‌ಗಳನ್ನು ಸರಬರಾಜು ಮಾಡುವುದು. (ಉತ್ತಮ ಗುಣಮಟ್ಟ ಇರುವ ಬಗ್ಗೆ 3ನೇ ವ್ಯಕ್ತಿ ತಪಾಸಣೆ ತಂಡದವರ ವರದಿಯನ್ನು ಪರಿಶೀಲಿಸಿ ಕಾರ್ಮಿಕ ಸೇವಾ ಕೇಂದ್ರದಲ್ಲಿ (KSK) ಸ್ವೀಕೃತಿ ಪಡೆಯುವುದು).

8) ಕಾರ್ಯಾದೇಶದಲ್ಲಿ ತಿಳಿಸಿರುವಂತೆ ಸದರಿ ಕಿಟ್‌ಗಳು 10,000 ಗಳಿಗಿಂತ ಹೆಚ್ಚಿದ್ದಲ್ಲಿ 6 ತಿಂಗಳ ಅವಧಿಯಲ್ಲಿ ಕಾರ್ಮಿಕ ಅಧಿಕಾರಿವಾರು ಸೂಚಿಸಿರುವ ಪ್ರಮಾಣದನ್ವಯ ಕಾರ್ಯಾದೇಶ ಪಡೆದ ದಿನದಿಂದ 60 ದಿನಗಳೊಳಗೆ 33.34% ಮತ್ತು ತದನಂತರದ 45 ದಿನಗಳೊಳಗೆ 33.33% ಹಾಗೂ ತದನಂತರದ 45 ದಿನಗಳೊಳಗೆ 33.33% ಕಿಟ್‌ಗಳನ್ನು ಸರಬರಾಜು ಮಾಡುವುದು. (ಉತ್ತಮ ಗುಣಮಟ್ಟ ಇರುವ ಬಗ್ಗೆ 3ನೇ ವ್ಯಕ್ತಿ ತಪಾಸಣೆ ತಂಡದವರ ವರದಿಯನ್ನು ಪರಿಶೀಲಿಸಿ ಕಾರ್ಮಿಕ ಸೇವಾ ಕೇಂದ್ರದಲ್ಲಿ (KSK) ಸ್ವೀಕೃತಿ ಪಡೆಯುವುದು).

9) ಒಂದುವೇಳೆ ಸಂಬಂಧಪಟ್ಟ ಕಾರ್ಮಿಕ ಸೇವಾ ಕೇಂದ್ರದವರು ಸ್ವೀಕೃತಿ ಪಡೆದು 60 ದಿನ ಹಾಗೂ 45 ದಿನಕ್ಕಿಂತ ಮುಂಚಿತವಾಗಿ ಫಲಾನುಭವಿಗಳಿಗೆ ವಿತರಣೆ ಮಾಡಿ, ಫಲಾನುಭವಿಗಳ ಪಟ್ಟಿಯನ್ನು ಮಂಡಳಿಗೆ ಸಲ್ಲಿಸಿದ್ದಲ್ಲಿ, ಸರಬರಾಜುದಾರರು Milestone ನ ಎರಡನೇ ಹಂತದ ಕಿಟ್‌ಗಳ ಪ್ರಮಾಣವನ್ನು ನಿಯಮಾನುಸಾರ ಸರಬರಾಜು ಮಾಡಬಹುದಾಗಿರುತ್ತದೆ.

**<u>2025-26ನೇ ಸಾಲಿನಲ್ಲಿ 38 ಕಾರ್ಮಿಕ ಅಧಿಕಾರಿವಾರು ಒಟ್ಟು ಮಂಡಳಿಯಿಂದ ಏಜೇನ್ಸಿಗಳ ಮುಖಾಂತರ 3,89,355 ಸುರಕ್ಷತಾ ಕಿಟ್‌ಗಳನ್ನು ವಿತರಿಸುವ ಸಂಬಂಧ, ಸಂಬಂಧಪಟ್ಟ ಕಾರ್ಮಿಕ ಅಧಿಕಾರಿ ಕಾರ್ಮಿಕ ಸೇವಾ ಕೇಂದ್ರ (KSK) ರವರ ಜವಾಬ್ದಾರಿಗಳು</u>**

1. ಒಟ್ಟು 38 ಕಾರ್ಮಿಕ ಅಧಿಕಾರಿವಾರು ಸುರಕ್ಷತಾ ಕಿಟ್‌ಗಳನ್ನು ಕಾರ್ಮಿಕ ಸೇವಾ ಕೇಂದ್ರಗಳಿಗೆ ಸರಬರಾಜು ಮಾಡಲು ಕಾರ್ಯಾದೇಶದಲ್ಲಿ ಸೂಚಿಸಿರುವ ಏಜೇನ್ಸಿಗಳಿಗೆ ಬಾರ್ ಕೋಡ್ ಜನರೇಟ್ ಮಾಡಿ ನೀಡುವುದು.

2. ತದನಂತರ, 3ನೇ ವ್ಯಕ್ತಿ ತಪಾಸಣೆ ಪೂರ್ಣಗೊಂಡ ನಂತರ ಏಜೇನ್ಸಿದಾರರು ಕಿಟ್‌ಗಳನ್ನು ಸರಬರಾಜು ಮಾಡುವುದಕ್ಕಿಂತ ಮುಂಚಿತವಾಗಿ ತಮಗೆ ಮಾಹಿತಿಯನ್ನು ನೀಡಿದ ನಂತರ ಕಿಟ್‌ಗಳನ್ನು ಬಾರ್ ಕೋಡ್‌ನೊಂದಿಗೆ ಸ್ಕ್ಯಾನ್ ಮಾಡಿ ಸ್ವೀಕರಿಸಲು ಅಗತ್ಯ ವ್ಯವಸ್ಥೆಯನ್ನು ಸಿದ್ಧಪಡಿಸಿಕೊಂಡು ಏಜೇನ್ಸಿದಾರರಿಗೆ ಸ್ವೀಕೃತಿ ಚಲನ್ ನೀಡಲು ಕ್ರಮವಹಿಸಬೇಕಾಗಿರುತ್ತದೆ.

3. **2024-25ನೇ ಸಾಲಿನಲ್ಲಿ 1.96 ಲಕ್ಷ ಸುರಕ್ಷತಾ ಕಿಟ್‌ಗಳನ್ನು 43 ಕಾರ್ಮಿಕ ಅಧಿಕಾರಿವಾರು ಖರೀದಿ ಮಾಡಿ ಈಗಾಗಲೇ 1.08 ಲಕ್ಷ ಕಿಟ್‌ಗಳನ್ನು ವಿತರಿಸಲಾಗಿದ್ದು, ಉಳಿದ ಕಿಟ್‌ಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.** 2025-26ರಲ್ಲಿ 3.89 ಲಕ್ಷ ಕಿಟ್‌ಗಳನ್ನು ವಿತರಿಸಲು ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

4. **ಆದುದರಿಂದ, ಈಗಾಗಲೇ 2024-25ನೇ ಸಾಲಿನಲ್ಲಿ ಸುರಕ್ಷತಾ ಕಿಟ್‌ಗಳನ್ನು ವಿತರಿಸಿದ ಫಲಾನುಭವಿಗಳಿಗೆ (ಸದರಿ ಫಲಾನುಭವಿಗಳ ಪಟ್ಟಿಯು ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳ ಕಛೇರಿಗಳಲ್ಲಿ ಲಭ್ಯವಿರುತ್ತದೆ) ಹೊರತುಪಡಿಸಿ, ಉಳಿದ ನೋಂದಾಯಿತ ಅರ್ಹ ಫಲಾನುಭವಿಗಳಿಗೆ ಸುರಕ್ಷತಾ ಕಿಟ್‌ಗಳನ್ನು ಜೇಷ್ಠತೆಯ ಆಧಾರದ (ನೋಂದಣಿ ಹಿರಿತನ) ಮೇಲೆ ವಿತರಿಸುವುದು. ತದನಂತರ ಅದೇ ವೃತ್ತಿಯಲ್ಲಿ ಸಹಾಯಕರೆಂದು (Trade Wise Helpers) ನೋಂದಣಿಯಾಗಿರುವ ಅರ್ಹ ಫಲಾನುಭವಿಗಳಿಗೆ ಸದರಿ ಕಿಟ್‌ಗಳನ್ನು ವಿತರಿಸುವುದು ಕಾರ್ಮಿಕ ಸೇವಾ ಕೇಂದ್ರದ ಜವಾಬ್ದಾರಿಯಾಗಿರುತ್ತದೆ.**

5. ಕಾರ್ಯಾದೇಶದಲ್ಲಿ Milestone ಪ್ರಕಾರ ಸೂಚಿಸಿದಂತೆ ಕಿಟ್‌ಗಳ ಸ್ವೀಕೃತಿಯನ್ನು ಪಡೆಯಲು ಅಗತ್ಯ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದು. ಒಂದು ವೇಳೆ Milestone ಪ್ರಕಾರ ಕಿಟ್‌ಗಳನ್ನು ಸ್ವೀಕರಿಸಲು ಸ್ಥಳಾವಕಾಶದ ಕೊರತೆ ಇದ್ದಲ್ಲಿ, 2 ತಿಂಗಳ ಮಟ್ಟಿಗೆ ಬಾಡಿಗೆ ವ್ಯವಸ್ಥೆಯನ್ನು ಮಾಡಿಕೊಂಡು ಸ್ವೀಕರಿಸುವುದು. ಸದರಿ ಬಾಡಿಗೆ ಮೊತ್ತವನ್ನು ಮಂಡಳಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಕ್ಲೇಮ್ ಮಾಡಬಹುದಾಗಿರುತ್ತದೆ.

6. ಕಾರ್ಮಿಕ ಸೇವಾ ಕೇಂದ್ರದಲ್ಲಿ ಸ್ವೀಕರಿಸಿದ ಕಿಟ್‌ಗಳನ್ನು 15 ದಿನಗಳೊಳಗಾಗಿ ಅರ್ಹ ಫಲಾನುಭವಿಗಳಿಗೆ ವಿತರಿಸಿ, ಫಲಾನುಭವಿಗಳ ಪಟ್ಟಿಯನ್ನು ಮಂಡಳಿಗೆ ಸಲ್ಲಿಸುವುದು ಕಾರ್ಮಿಕ ಸೇವಾ ಕೇಂದ್ರದ ಜವಾಬ್ದಾರಿಯಾಗಿರುತ್ತದೆ.

**2025-26ನೇ ಸಾಲಿನಲ್ಲಿ 38 ಕಾರ್ಮಿಕ ಅಧಿಕಾರಿವಾರು ಒಟ್ಟು ಮಂಡಳಿಯಿಂದ ಏಜೆನ್ಸಿಗಳ ಮುಖಾಂತರ 3,89,355 ಸುರಕ್ಷತಾ ಕಿಟ್‌ಗಳನ್ನು ವಿತರಿಸುವ ಸಂಬಂಧ, 3ನೇ ತಂಡದ ವ್ಯಕ್ತಿ ತಪಾಸಣಾ ತಂಡದವರು ನಿರ್ವಹಿಸಬೇಕಾದ ಕೆಲಸಗಳು**

1. ಮಂಡಳಿಯಿಂದ ತಮಗೆ 3ನೇ ವ್ಯಕ್ತಿ ತಪಾಸಣೆ ಮಾಡಲು ಪತ್ರವನ್ನು ಸ್ವೀಕರಿಸಿದ ನಂತರ ಪತ್ರದಲ್ಲಿ ತಿಳಿಸಿರುವ ವೃತ್ತಿವಾರು ಸುರಕ್ಷತಾ ಕಿಟ್‌ಗಳ ಸಂಖ್ಯೆಯ ಪ್ರಮಾಣಗಳನ್ನು ಪರಿಶೀಲಿಸುವುದು ಹಾಗೂ ವೃತ್ತಿವಾರು ಸುರಕ್ಷತಾ ಕಿಟ್‌ಗಳಲ್ಲಿ ಇರಬೇಕಾಗಿರುವ ಸಾಮಗ್ರಿಗಳನ್ನು as per Technical Specifications ಗಳಂತೆ ಪರೀಕ್ಷಿಸಿ, ಸಂಗ್ರಹಿಸಿರುವ ಒಟ್ಟು ಪ್ರಮಾಣದಲ್ಲಿ randomly ವೃತ್ತಿವಾರು ಶೇ.10 ರಷ್ಟು ಕಿಟ್‌ಗಳನ್ನು ಗುಣಮಟ್ಟದ ಬಗ್ಗೆ ಮಂಡಳಿಗೆ ವರದಿಯನ್ನು GPS ಫೋಟೋಗಳ ಜೊತೆಗೆ ಸಲ್ಲಿಸಬೇಕಾಗಿರುತ್ತದೆ.

2. ಸರಬರಾಜು ಮಾಡುವ ಮೊದಲು ಸುರಕ್ಷತಾ ಕಿಟ್‌ಗಳ Technical Specifications ಗಳಲ್ಲಿ ಯಾವುದಾದರು ನ್ಯೂನ್ಯತೆ ಕಂಡುಬಂದಲ್ಲಿ ಮಂಡಳಿಗೆ ಕೂಡಲೇ ತಿಳಿಸುವುದು ಹಾಗೂ ಕಳಪೆ ಗುಣಮಟ್ಟ ಕಂಡುಬಂದಲ್ಲಿ ಸದರಿ ಕಿಟ್‌ಗಳನ್ನು ತಿರಸ್ಕರಿಸಿ ಮಂಡಳಿಗೆ ವರದಿ ನೀಡುವುದು.

(ಭಾರತಿ ಡಿ., ಭಾ.ಆ.ಸೇ.)
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ&ಇ.ನಿ.ಕಾ.ಕ.ಮಂಡಳಿ

**ಪ್ರತಿಯನ್ನು:**

1) ಉಪ ಕಾರ್ಮಿಕ ಆಯುಕ್ತರು,-ಬೆಂಗಳೂರು ಪ್ರಾದೇಶಿಕ -1 &2, ಹಾಸನ, ಬೆಳಗಾವಿ, ಕಲಬುರ್ಗಿ ಹಾಗೂ ಪ್ರಚಾರ & ಅಂಕಿಅಂಶ, ಬೆಂಗಳೂರು-ಇವರಿಗೆ ಮಾಹಿತಿಗಾಗಿ
2) ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ, 1 ರಿಂದ 4 ಬೆಂಗಳೂರು, ಮೈಸೂರು, ದಾವಣಗೆರೆ, ಚಿಕ್ಕಮಗಳೂರು, ಮಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಹುಬ್ಬಳ್ಳಿ. -ಇವರಿಗೆ ಮಾಹಿತಿಗಾಗಿ
3) ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ-ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) SRIT India Pvt. Ltd, #113/1B, ITPL Main Road, Kundalahalli, Bengaluru-560037- ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಸಂಬಂಧಪಟ್ಟ ಕಾರ್ಯಾದೇಶ ಪಡೆದ ಎಲ್ಲಾ ಏಜೆನ್ಸಿಗಳಿಗೆ-ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.